# ಶ್ರೀರಾಮಕೃಷ್ಣ ಸಂಪ್ರದಾಯದಲ್ಲಿ ಶಿವನಾಮ ಸಂಕೀರ್ತನೆ

ಬ್ರಹ್ಮಚಾರಿ ನರೇಶಚೈತನ್ಯ

ರಾಮಕೃಷ್ಣ-ವಿವೇಕಾನಂದ ಸಂಪ್ರದಾಯದಲ್ಲಿ ಸಂಕೀರ್ತನೆಗಳನ್ನು ವಿಶೇಷ ಸಂದರ್ಭಗಳಲ್ಲಿ ಹಾಡುವ ಪದ್ಧತಿಯಿದೆ. ಈಗ ಪ್ರಚಲಿತವಿರುವ ಶ್ರೀ ಶಿವನಾಮ ಸಂಕೀರ್ತನೆ ಮೂಲದಲ್ಲಿ ಹೇಗಿತ್ತು , ಮುಂದೆ ಹೇಗೆ ಬದಲಾಯಿತು ಮುಂತಾದ ಸಂಗತಿಗಳು ಕಾಲಗರ್ಭದಲ್ಲಿ ಅಡಗಿಹೋಗಿವೆ. ಈ ಹಿನ್ನೆಲೆಯಲ್ಲಿ ಹಲವು ಮಾಹಿತಿಗಳೊಂದಿಗೆ ಈ ಬಗ್ಗೆ ಬರೆದಿರುವ ಲೇಖಕರು ಮಾದಿಹಳ್ಳಿ ರಾಮಕೃಷ್ಣ ಮಿಷನ್ ಆಶ್ರಮದಲ್ಲಿ ಸೇವೆ ಸಲ್ಲಿಸುತ್ತಿದ್ದಾರೆ.

'ಶಿವ' ಈ ಶಬ್ದದ ಅರ್ಥವೇ 'ಮಂಗಳ' ಎಂದು. ಇಂಥ ಮಂಗಳಕರವಾದ ಶಿವನಾಮವನ್ನು ನಿತ್ಯ ಲಿಖಿತವಾಗಿಯೂ, ವಾಚಿಕವಾಗಿಯೂ, ಮಾನಸಿಕವಾಗಿಯೂ ಜಪಿಸುವ, ಸ್ಮರಿಸುವ ಕೋಟ್ಯಂತರ ಶಿವಭಕ್ತರು, ಸನಾತನ ಧರ್ಮಿಗಳು ಇದ್ದಾರೆ. ಅನಾದಿ ಕಾಲದಿಂದ ಪರಮೇಶ್ವರನಾದ ಶಿವನನ್ನು ಉಪಾಸಿಸಿದ ಭಕ್ತಾಗ್ರೇಸರರಲ್ಲಿ ನಂದಿ, ಭೃಂಗಿ, ಉಪಮನ್ಯು, ಮಾರ್ಕಂಡೇಯ, ಅಗಸ್ತ್ಯ, ಗೌತಮರಾದಿಯಾಗಿ ಋಷಿಗಳು, ಬ್ರಹ್ಮ, ವಿಷ್ಣು, ಇಂದ್ರ, ಯಮಾದಿ ದೇವತೆಗಳು, ರಾಮ, ಕೃಷ್ಣಾದಿ ಅವತಾರಗಳು, ಬಾಣಾಸುರ, ರಾವಣಾದಿ ರಾಕ್ಷಸರು, ಶಂಕರ ಭಗವತ್ಪಾದರು, ರೇಣುಕ ಭಗವತ್ಪಾದರು, ನೀಲಕಂಠ ಆರಾಧ್ಯರಾದಿಯಾಗಿ ಆಚಾರ್ಯರು, ಸುಂದರಮೂರ್ತಿಯೇ ಮೊದಲಾದ ನಾಯನ್ಮಾರರು, ಬಸವಾದಿ ಪ್ರಮಥ ಶಿವಶರಣರು, ಅನೇಕ ಶಿವಾಚಾರ್ಯರು - ಹೀಗೆ ಅಸಂಖ್ಯ ಶಿವಭಕ್ತಶಿರೋಮಣಿಗಳು ಇದ್ದಾರೆ. ಜಾತಿ, ಮತ, ಲಿಂಗಗಳ ಭೇದವೆಣಿಸದೆ ಶಿವನನ್ನು ಅರ್ಚಿಸಿ, ಪೂಜಿಸಿ, ಪ್ರೇಮಿಸಿ ಅವನನ್ನು ಕಂಡವರ ಹೆಸರುಗಳು, ಉದಾಹರಣೆಗಳು ಇತಿಹಾಸದ ಉದ್ದಗಲಕ್ಕೂ ದೊರೆಯುತ್ತವೆ. ಕಳೆದ ಶತಮಾನದಲ್ಲಿ ಅವತರಿಸಿದ ಯುಗಾವತಾರ ಶ್ರೀರಾಮಕೃಷ್ಣ ಪರಮಹಂಸ ದೇವರು, ಯುಗಾಚಾರ್ಯ ಶ್ರೀ ವಿವೇಕಾನಂದ ದೇಶಿಕೇಂದ್ರರು ಶ್ರೀಮನ್ಮಹಾದೇವನನ್ನು ಆರಾಧಿಸಿರುವರು. ಈ ಮಹಾತ್ಮರೆಲ್ಲರೂ ಋಷಿಪ್ರಣೀತವಾದ ಅಥವಾ ಸ್ವರಚಿತವಾದ ಸ್ತೋತ್ರಗಳಿಂದ ಭಗವಂತನನ್ನು ಸ್ತುತಿಸಿದ್ದಾರೆ. ಹೀಗೆ ಶ್ರೀ ಶಿವನ ಕುರಿತು ಎಣಿಸಲಾರದಷ್ಟು ಸ್ತೋತ್ರಗಳಿವೆ. ಭಕ್ತವತ್ಸಲನಾದ ಶ್ರೀ ಶಿವಪರಮಾತ್ಮನ ನಾಮಗುಣಕೀರ್ತನೆ, ಲೀಲಾಚಿಂತನೆ, ಸ್ಮರಣೆ, ಧ್ಯಾನ — ಶಿವನ ಕುರಿತು ಇರುವ ಸ್ತೋತ್ರಗಳ ಉದ್ದೇಶ. ಶ್ರೀರಾಮಕೃಷ್ಣ ಮಠದಲ್ಲಿ ಶಿವನ ಅನೇಕ ಸ್ತುತಿ, ಭಜನೆಗಳು ಪ್ರಚಲಿತ. ಅವುಗಳಲ್ಲಿ ಶ್ರೀ ಶಿವನಾಮಸಂಕೀರ್ತನೆಯು ಅತಿ ಪ್ರಸಿದ್ಧ, ವೈಶಿಷ್ಟ್ಯಪೂರ್ಣ ಮತ್ತು ಆಕರ್ಷಣೀಯ.

ಈ ಶಿವನಾಮ ಸಂಕೀರ್ತನೆ ಹೇಗೆ ರೂಢಿಗೆ ಬಂದಿತು? ಎಲ್ಲಿಂದ ಬಂತು? ಇದರ ಕರ್ತೃ ಯಾರು? ಈ ಸಂಕೀರ್ತನೆ ಶ್ರೀರಾಮಕೃಷ್ಣ ಸಂಪ್ರದಾಯಕ್ಕೆ ಸೇರಿಕೊಂಡಿದ್ದು ಹೇಗೆ? ಯಾವಾಗಿನಿಂದ ಇದು ಹಾಡಲ್ಪಡುತ್ತಿದೆ? ಯಾರು ಇದನ್ನು ಸೇರಿಸಿದ್ದು? ಇದಕ್ಕೆ ರಾಗ ಸಂಯೋಜನೆ ಮಾಡಿದವರಾರು? ಎಂಬೆಲ್ಲ ಮಾಹಿತಿಯನ್ನು, ಜೊತೆಗೆ ಶಿವನಾಮಸಂಕೀರ್ತನೆಯ ಪೂರ್ಣಲಿಪಿಯನ್ನು ಒದಗಿಸಿ ಕೊಡುವುದು ಈ ಲೇಖನದ ಉದ್ದೇಶ.

## ಶ್ರೀ ನಂದಿಕ್ಷೇತ್ರದಲ್ಲಿ ಪ್ರಥಮ ಶ್ರವಣ

ಭಗವಾನ್ ಶ್ರೀರಾಮಕೃಷ್ಣ ಪರಮಹಂಸದೇವರ ಮಾನಸ ಪುತ್ರರೂ, ಅಧ್ಯಾತ್ಮ ಚಕ್ರವರ್ತಿಗಳೂ, ಪ್ರಥಮ ಸಂಘಾಧ್ಯಕ್ಷರೂ ಆಗಿದ್ದ ಪರಮಪೂಜ್ಯ ಸ್ವಾಮಿ ಬ್ರಹ್ಮಾನಂದ ಮಹಾರಾಜರು ('ಶ್ರೀ ಮಹಾರಾಜ'ರು) ೧೯೨೧ರಲ್ಲಿ ದಕ್ಷಿಣ ಭಾರತದ ಯಾತ್ರೆಗೈದರು. ಅವರ ಜೊತೆ ಶ್ರೀ ಪರಮಹಂಸದೇವರ ಮತ್ತೊಬ್ಬ ಶಿಷ್ಯರಾದ ಮಹಾಪುರುಷ ಸ್ವಾಮಿ ಶಿವಾನಂದರು ಬಂದಿದ್ದರು. ಮದ್ರಾಸ್ ಮೂಲಕ ಬೆಂಗಳೂರಿಗೆ ಆಗಮಿಸಿದ್ದ ಯತಿಪುಂಗವರೀರ್ವರು ಈ ಬಾರಿ ಇಲ್ಲಿನ ಶ್ರೀನಂದಿಕ್ಷೇತ್ರದ (ಬಸವನಗುಡಿ) ಶ್ರೀರಾಮಕೃಷ್ಣ ಮಠದಲ್ಲಿ ಜೂನ್ ೨೧ನೇ ತಾರೀಕಿನಿಂದ ಅಕ್ಟೋಬರ್ ೫ರವರೆಗೆ ತಂಗಿದ್ದರು. ಆಗಲೇ ಶ್ರೀಮಹಾರಾಜರು ಇಲ್ಲಿನ ಸ್ಥಳೀಯ ಶೈವ ಸಂಪ್ರದಾಯದ ಭಕ್ತರು ಗಾನ ಮಾಡುತ್ತಿದ್ದ 'ಶ್ರೀಶಿವಮಾತೃಕಾ ವರ್ಣಾಕ್ಷರಮಾಲಾ ಸ್ತೋತ್ರ'ವನ್ನು ಪ್ರಪ್ರಥಮವಾಗಿ ಆಲಿಸಿದ್ದು. ಈ ಭಕ್ತಿಪೂರ್ಣವಾದ ಸ್ತೋತ್ರವನ್ನು ಕೇಳಿದೊಡನೆ ಅವರು ಶಿವಭಕ್ತಿಯಿಂದ ಉನ್ಮತ್ತರಾಗಿ, ಭಾವಸಾಮ್ರಾಜ್ಯದಲ್ಲಿ ತೇಲಿಹೋದರು. ಈ ನಾಮಸಂಕೀರ್ತನೆಯನ್ನು ಬೇಲೂರು ಮಠಕ್ಕೆ ಕೊಂಡೊಯ್ಯಬೇಕು, ಅಲ್ಲಿನ ಭಕ್ತರ ಮಧ್ಯೆ ಈ ಪರಮ ಭಾವಪೂರ್ಣ ಸ್ತೋತ್ರವನ್ನು ಶಾಶ್ವತವಾಗಿ ಸ್ಥಾಪಿಸಬೇಕೆಂದು ನಿರ್ಧರಿಸಿದರು. ತಮ್ಮ ಜೊತೆ ಇದ್ದ ಸಂನ್ಯಾಸಿ ಶಿಷ್ಯರಿಗೆ ಇದನ್ನು ಸಂಗ್ರಹಿಸುವಂತೆ ಆದೇಶಿಸಿದರು.

ಹೀಗೇ ಶ್ರೀರಾಮಕೃಷ್ಣ ಪರಂಪರೆಯಲ್ಲಿ ಹಾಡಲ್ಪಡುತ್ತಿರುವ ಶಿವನಾಮಸಂಕೀರ್ತನೆಗೆ ನಮ್ಮ ಕನ್ನಡನಾಡು ಮೂಲ ಹೇತುವಾಯಿತು!

## ಸಂಕಲನ ಮತ್ತು ರಾಗ ಸಂಯೋಜನೆ

ಕರ್ನಾಟಕದಿಂದ ಸಂಗ್ರಹಿಸಿದ 'ಶ್ರೀ ಶಿವಮಾತೃಕಾ ವರ್ಣಾಕ್ಷರಮಾಲಾ ಸ್ತೋತ್ರ'ಕ್ಕೆ ಶ್ರೀಮಹಾರಾಜರು ಮಂಗಲಾಚರಣ, ಧ್ಯಾನ, ಸ್ತುತಿ ಇತ್ಯಾದಿಯನ್ನು ಸೇರಿಸುವಂತೆ ಮಠದ ಯತಿವೃಂದಕ್ಕೆ ನಿರ್ದೇಶಿಸಿದರು. ಅವರ ಆಜ್ಞಾನುಸಾರ ಈ ಸಂಕೀರ್ತನೆಗೆ ಶ್ರೀ ಶಂಕರಾಚಾರ್ಯ ವಿರಚಿತ ಶಿವಾಪರಾಧ ಕ್ಷಮಾಪಣ ಸ್ತೋತ್ರ, ಶಿವಪಂಚಾಕ್ಷರಿ ಸ್ತೋತ್ರ, ದಕ್ಷಿಣಾಮೂರ್ತಿ ಸ್ತೋತ್ರ,

ಪುಷ್ಪದಂತ ವಿರಚಿತ ಶಿವಮಹಿಮ್ನ ಸ್ತೋತ್ರ ಮತ್ತು ವೇದಸಾರ ಶಿವ ಸ್ತೋತ್ರದಿಂದ ಕೆಲವು ಶ್ಲೋಕಗಳನ್ನಾರಿಸಿಕೊಂಡು ಸೇರಿಸಿ ಸಂಕಲನ ಮಾಡಲಾಯಿತು. ನಂತರ ಮಠದ ಸಂನ್ಯಾಸಿಗಳೆಲ್ಲ ಸೇರಿ ಶ್ರೀಮಹಾರಾಜರ ಸಮ್ಮುಖದಲ್ಲಿ ಇದನ್ನು ಪ್ರಸ್ತುತಪಡಿಸಿದರು. ಇದರಿಂದ ಶ್ರೀ ಮಹಾರಾಜರಿಗೆ ಅತ್ಯಾನಂದವಾಯಿತು. ಶ್ರೀರಾಮನಾಮ ಸಂಕೀರ್ತನೆಯಂತೆ ಇದಕ್ಕೂ ರಾಗಸಂಯೋಜನೆ ಮಾಡಿದವರು ಸ್ವಾಮಿ ಅಂಬಿಕಾನಂದರು ಆಗಿರಬಹುದು ಎಂಬುದು ನಮ್ಮ ಅನಿಸಿಕೆ.

### ಶ್ರೀ ಶಿವನಾಮ ಸಂಕೀರ್ತನೆಯ ಮುದ್ರಣ ಮತ್ತು ಪ್ರಸಾರ

ತಮ್ಮ ನಿರ್ದೇಶಾನುಸಾರ ಸಂಕಲನಗೊಂಡ ಈ ಸ್ತೋತ್ರ ಸಮೂಹವನ್ನು, ಶ್ರೀ ಮಹಾರಾಜರು ಬಹಳವಾಗಿ ಮೆಚ್ಚಿ, ಮಠದಲ್ಲಿ ಇದರ ನಿಯಮಿತ ಗಾಯನವಾಗುವಂತೆ ಸಂನ್ಯಾಸಿಗಳನ್ನು ಪ್ರೇರೇಪಿಸಿದರು. ಮತ್ತು ಇದನ್ನು 'ಶ್ರೀ ಶ್ರೀ ಶಿವ ನಾಮ ಸಂಕೀರ್ತನೆ' ಯೆಂದು ಕರೆದರು. ಅವರ ಹಿರಿಯಾಸೆಯಂತೆ ಇದು ೧೯೨೪ರಲ್ಲಿ ಮೊದಲ ಮುದ್ರಣ ಕಂಡಿತು. ಈ ಸಂಕೀರ್ತನೆಯು ವಂಗದೇಶದ (ಬಂಗಾಳ) ಪ್ರತಿಯೊಬ್ಬ ಸನಾತನ ಧರ್ಮಿಗಳ ಮನೆ-ಮನೆಗೆ, ಹೃನ್ಮನಗಳಿಗೆ ಮುಟ್ಟಬೇಕೆಂದು ಆಶಿಸಿ, ಇದನ್ನು ಅವರು ನಿಃಶುಲ್ಕವಾಗಿ ವಿತರಣೆ ಮಾಡಲು ವ್ಯವಸ್ಥೆ ಮಾಡಿದರು.

### ಶ್ರೀ ಶಿವಮಾತೃಕಾವರ್ಣಾಕ್ಷರಮಾಲಾ ಸ್ತೋತ್ರ

ಶ್ರೀ ಶಿವಮಾತೃಕಾವರ್ಣಾಕ್ಷರ ಮಾಲಾ ಸ್ತೋತ್ರವು ಶ್ರೀಶಿವ ಪರಮಾತ್ಮನನ್ನು ಕುರಿತು ಇರುವ ಒಂದು ದಿವ್ಯ ಸ್ತೋತ್ರ. ಈ ಸ್ತೋತ್ರದ ವೈಶಿಷ್ಟ್ಯವೇನೆಂದರೆ ಇದರ ಪ್ರತಿಯೊಂದು ಸಾಲು ಸಂಸ್ಕೃತ ಭಾಷೆಯ ಒಂದೊಂದು ಅಕ್ಷರಗಳಿಂದ ಆರಂಭವಾಗುತ್ತದೆ. ಅ ದಿಂದ ಕ್ಷ- ಪರ್ಯಂತವಾಗಿ ಇರುವ ದೇವಭಾಷೆಯ ಒಂದೊಂದು ಅಕ್ಷರಗಳು ಪ್ರತಿ ಸಾಲಿನ ಮೊದಲಕ್ಷರವಾಗಿ ಮಹಾದೇವನ ಗುಣಗಾನ ಮಾಡುತ್ತವೆ. ಆದ್ದರಿಂದಲೇ ಇದನ್ನು '**ಮಾತೃಕಾವರ್ಣಾಕ್ಷರಮಾಲಾ ಸ್ತೋತ್ರ**' ಎಂದು ಕರೆದಿರುವರು. ಸಾಂಬ ಶಿವನ ಈ ಸ್ತೋತ್ರವು ಅತ್ಯಂತ ಆಕರ್ಷಣೀಯ ಮತ್ತು ಮನೋಹರವಾಗಿರುವುದು. ಇನ್ನು ಈ ಸ್ತೋತ್ರವನ್ನು ಭಾವ-ರಾಗ-ತಾಳಬದ್ಧವಾಗಿ ಹಾಡಿದಲ್ಲಿ ಭಕ್ತ್ಯಾನಂದವನ್ನು ಉಂಟು ಮಾಡುವಂಥದ್ದು.

ಪ್ರತಿ ಸಾಲುಗಳ ಮಧ್ಯದಲ್ಲಿ '**ಸಾಂಬ ಸದಾಶಿವ ಸಾಂಬ ಸದಾಶಿವ ಸಾಂಬ ಸದಾಶಿವ ಸಾಂಬ ಶಿವ**' ಎಂದು ಹಾಡುವುದು ವಾಡಿಕೆ. ಆದ್ದರಿಂದ ಈ ಸ್ತೋತ್ರವು '**ಸಾಂಬ ಸದಾಶಿವ ಅಕ್ಷರ ಮಾಲಾ ಸ್ತೋತ್ರ**'ವೆಂದೂ ಪ್ರಸಿದ್ಧ. ಇದನ್ನು '**ಪರಮೇಶ್ವರ ಅಕ್ಷರ ಮಾಲಾ ಸ್ತೋತ್ರ**'ವೆಂದೂ ಕರೆಯುತ್ತಾರೆ.

ಈ ಸ್ತೋತ್ರದ ಕರ್ತೃವು ಯಾರೆಂದು ತಿಳಿದುಬಂದಿಲ್ಲ. ಆದರೆ ಈ ಸ್ತೋತ್ರವು ಶೈವ ಸಂಪ್ರದಾಯದಲ್ಲಿ - ವಿಶೇಷವಾಗಿ ಶೈವ ಸಿದ್ಧಾಂತ ಸಂಪ್ರದಾಯದಲ್ಲಿ - ಪಾರಂಪರಿಕವಾಗಿ ಪ್ರಚಲಿತವಿದೆ. ಇಂಥ ಮಾಧುರ್ಯ-ಐಶ್ವರ್ಯಪೂರ್ಣವಾದ, ಪರಶಿವನ ಲೀಲಾಯುಕ್ತ ನಾಮಾಮೃತವನ್ನು ಒಳಗೊಂಡಿರುವ, ಭಾಷೆಯಲ್ಲಿ ದಿವ್ಯವೂ, ಭಾವದಲ್ಲಿ ಭವ್ಯವೂ, ರಚನೆಯಲ್ಲಿ ನವ್ಯವೂ ಆದ ಈ ಸ್ತೋತ್ರವು ಶ್ರೀಮಹಾರಾಜರನ್ನು ಭಾವಸಮಾಧಿಗೆ ಏರಿಸಿದ್ದರಲ್ಲಿ ಆಶ್ಚರ್ಯವೇನಿದೆ? ಇಂಥ ಭಾವೋದ್ದೀಪನಕಾರಿ ಸ್ತೋತ್ರವನ್ನು ರಚಿಸಿರುವವರು ಯಾರೇ ಇರಲಿ, ಅವರಿಗೆ ನಾವು ಕೈಮುಗಿದು ಶಿರಬಾಗಿ ನಮಿಸಲೇಬೇಕು.

### ಮೊದಲ ಆವೃತ್ತಿಯ ಭೂಮಿಕೆ

ಮೊದಲ ಆವೃತ್ತಿಯ ಬಿಡುಗಡೆಯ ಸಮಯಕ್ಕೆ ಶ್ರೀಮಹಾರಾಜರು ತಮ್ಮ ಭೌತಿಕ ಶರೀರ ತ್ಯಜಿಸಿ ನಿತ್ಯಲೀಲೆಗೆ ಕಾಲಿಟ್ಟಿದ್ದರು. ೧೯೨೧ ರಲ್ಲೇ ಅವರು ಇದನ್ನು ಬೇಲೂರು ಮಠಕ್ಕೆ ಕೊಂಡೊಯ್ದರೂ, ಕಾರಣಾಂತರಗಳಿಂದ ೧೯೨೪ರಲ್ಲಿ ಇದರ ಮೊದಲ ಆವೃತ್ತಿಯು, 'ದಿ ಯುರೇಕಾ ಪ್ರಿಂಟಿಂಗ್ ವರ್ಕ್ಸ್, ಅಲಹಾಬಾದ್' ನಿಂದ ಮುದ್ರಣಗೊಂಡಿತು. ಮೊದಲ ಆವೃತ್ತಿಯ ಭೂಮಿಕೆಯನ್ನು ಸ್ವಾಮಿ ಶಿವಾನಂದರು ಬರೆದರು. ಭೂಮಿಕೆಯಲ್ಲಿ ಅವರು ಹೀಗೆ ಬರೆದಿರುತ್ತಾರೆ :

ಶ್ರೀ ಮಹಾರಾಜರು ಹೋದ ವರ್ಷ ಮತ್ತೆ ದಕ್ಷಿಣಕ್ಕೆ ಯಾತ್ರೆಗೈದರು. ನಾವು ಮತ್ತು ಇನ್ನು ಅನೇಕರು ಅವರ ಜೊತೆ ಹೋಗಿದ್ದೆವು. ಈ ಬಾರಿ ಬೆಂಗಳೂರಿನಲ್ಲಿ ಶ್ರೀರಾಮಕೃಷ್ಣ ಮಠದಲ್ಲಿ ಇದ್ದಾಗ ಶಿವನಾಮ ಕೀರ್ತನೆಯನ್ನು ಕೇಳಿ ಶ್ರೀಮಹಾರಾಜರೇ ಆದಿಯಾಗಿ ನಾವೆಲ್ಲರೂ ಅತ್ಯಂತ ಸಂಪ್ರೀತರಾದೆವು. ಈ ನಾಮ ಸಂಕೀರ್ತನೆ ಕೂಡ ರಾಮನಾಮಸಂಕೀರ್ತನೆಯಂತೆ ವಂಗದೇಶದಲ್ಲಿ ಪ್ರಚಾರವಾಗಲಿ ಎಂದು ಇಚ್ಛಿಸಿದರು. ಆದ ಕಾರಣ 'ಶಿವ ನಾಮ ಸಂಕೀರ್ತನೆ'ಯು ಮುದ್ರಿತವಾಯಿತು. ವಂಗದೇಶದ ನರ - ನಾರಿಯರೆಲ್ಲರೂ ಈ ಕೀರ್ತನೆ ಮಾಡಿ ಧನ್ಯರಾಗಲಿ ಎಂಬುದು ನಮ್ಮ ಇಚ್ಛೆ.

ಬೇಲೂರು ಮಠ — ಶುಭಾಕಾಂಕ್ಷಿ-

೧೪.೦೧.೧೯೨೩. — ಶಿವಾನಂದ.

### ಸ್ವಾಮಿ ಬ್ರಹ್ಮಾನಂದ ಸಂಕಲಿತ ಶ್ರೀ ಶಿವನಾಮ ಸಂಕೀರ್ತನೆಯ ಪಕ್ಷಿನೋಟ

ಶ್ರೀ ಮಹಾರಾಜರು ಸಂಕಲಿಸಿದ ಶಿವನಾಮ ಸಂಕೀರ್ತನೆಯ **ಮಂಗಲಾಚರಣ**ದಲ್ಲಿ ಮೊದಲು ಶ್ರೀಗುರು, ನಂತರ ಶ್ರೀಗಣೇಶ ಮತ್ತು ಶ್ರೀ ಸರಸ್ವತೀ ದೇವಿಯ ಪ್ರಣಾಮ ಮಂತ್ರಗಳಿವೆ. ಅನಂತರ **ಧ್ಯಾನಂ** ಎಂಬ ಶೀರ್ಷಿಕೆಯ ಅಡಿಯಲ್ಲಿ ಶ್ರೀ ಶಿವಾಪರಾಧ ಕ್ಷಮಾಪಣ ಸ್ತೋತ್ರದ ೧೪, ೧೫, ೧೬ನೇ ಶ್ಲೋಕಗಳಿವೆ. ನಂತರದ **ಸಂಕೀರ್ತನೆ** ಎಂಬ ಶೀರ್ಷಿಕೆಯ ಅಡಿಯಲ್ಲಿ, 'ಸಾಂಬ ಸದಾಶಿವ' ಎಂದು ಆರಂಭವಾಗುವ **ಶ್ರೀ ಶಿವಮಾತೃಕಾ ವರ್ಣಾಕ್ಷರಮಾಲಾ ಸ್ತೋತ್ರ**ವಿದೆ. ನಂತರ ಇರುವುದು **ಆತ್ಮ ಪ್ರಬೋಧನಮ್** - ಇಲ್ಲಿ ಶ್ರೀ ಶಿವಾಪರಾಧ ಕ್ಷಮಾಪಣಾ ಸ್ತೋತ್ರದ ೧೧ ಮತ್ತು ೧೨ನೆಯ ಶ್ಲೋಕಗಳಿವೆ. ತದನಂತರ ಇರುವುದು **ಸ್ತುತಿ** - ಇಲ್ಲಿ ಶಿವಮಹಿಮ್ನ ಸ್ತೋತ್ರದ ೨೬, ೭, ಮತ್ತು ೩೨ ನೆಯ ಶ್ಲೋಕಗಳಿವೆ. ಇದರ ನಂತರ **ಪ್ರಣಾಮ** ಎಂಬ ಶೀರ್ಷಿಕೆಯ ಅಡಿಯಲ್ಲಿ ಶ್ರೀ ಶಿವಪಂಚಾಕ್ಷರಿ ಸ್ತೋತ್ರ, ವೇದಸಾರ ಶಿವಸ್ತೋತ್ರದ ೮ನೆಯ ಶ್ಲೋಕ, ಶಿವ ಮಹಿಮ್ನ ಸ್ತೋತ್ರದ ೨೯, ೩೦ ನೆಯ ಶ್ಲೋಕ, ನಂತರ ಶ್ರೀದಕ್ಷಿಣಾಮೂರ್ತಿ ಸ್ತೋತ್ರ ದ ೧೧,೧೨,೧೫ ನೆಯ ಶ್ಲೋಕಗಳು, ಶಿವನ **ಪ್ರಣಾಮ ಮಂತ್ರ** ಮತ್ತು **ಫಲಶ್ರುತಿ**ಯ ಶ್ಲೋಕಗಳಿವೆ.

# ಸ್ವಾಮಿ ಬ್ರಹ್ಮಾನಂದ ಸಂಕಲಿತ ಶ್ರೀ ಶಿವನಾಮ ಸಂಕೀರ್ತನೆ

### ಮಂಗಲಾಚರಣಂ

ಬ್ರಹ್ಮಾನಂದಂ ಪರಮಸುಖದಂ ಕೇವಲಂ ಜ್ಞಾನಮೂರ್ತಿಂ
ದ್ವಂದ್ವಾತೀತಂ ಗಗನಸದೃಶಂ ತತ್ತ್ವಮಸ್ಯಾದಿ ಲಕ್ಷ್ಯಮ್ ।
ಏಕಂ ನಿತ್ಯಂ ವಿಮಲಮಚಲಂ ಸರ್ವಧೀಸಾಕ್ಷಿಭೂತಂ
ಭಾವಾತೀತಂ ತ್ರಿಗುಣರಹಿತಂ ಸದ್ಗುರುಂ ತಂ ನಮಾಮಿ ॥

ನಿತ್ಯಂ ಶುದ್ಧಂ ನಿರಾಭಾಸಂ ನಿರಾಕಾರಂ ನಿರಂಜನಮ್ ।
ನಿತ್ಯಬೋಧಂ ಚಿದಾನಂದಂ ಗುರುಂ ಬ್ರಹ್ಮ ನಮಾಮ್ಯಹಮ್ ॥

ಯಂ ಬ್ರಹ್ಮ ವೇದಾಂತವಿದೋ ವದಂತಿ
ಪರೇ ಪ್ರಧಾನಂ ಪುರುಷಂ ತಥಾನ್ಯೇ ।
ವಿಶ್ವೋದ್ಗತೇಃ ಕಾರಣಮೀಶ್ವರಂ ವಾ
ತಸ್ಮೈ ನಮೋ ವಿಘ್ನ-ವಿನಾಶನಾಯ ॥

ಯಾ ಕುಂದೇಂದು-ತುಷಾರಹಾರ-ಧವಲಾ ಯಾ ಶುಭ್ರ ವಸ್ತ್ರಾವೃತಾ।
ಯಾ ವೀಣಾ-ವರದಂಡ-ಮಂಡಿತಕರಾ ಯಾ ಶ್ವೇತ-ಪದ್ಮಾಸನಾ।
ಯಾ ಬ್ರಹ್ಮಾಚ್ಯುತ-ಶಂಕರ-ಪ್ರಭೃತಿಭಿಃ-ದೇವೈಃ ಸದಾ ವಂದಿತಾ।
ಸಾ ಮಾಂ ಪಾತು ಸರಸ್ವತೀ ಭಗವತೀ ನಿಶ್ಶೇಷ-ಜಾಡ್ಯಾಪಹಾ ॥

### ಧ್ಯಾನಂ

ಶಾಂತಂ ಪದ್ಮಾಸನಸ್ಥಂ ಶಶಧರಮುಕುಟಂ ಪಂಚವಕ್ತ್ರಂ ತ್ರಿನೇತ್ರಂ
ಶೂಲಂ ವಜ್ರಂ ಚ ಖಡ್ಗಂ ಪರಶುಮಪಿ ವರಂ ದಕ್ಷಿಣಾಂಗೇ ವಹಂತಮ್।
ನಾಗಂ ಪಾಶಂ ಚ ಘಂಟಾಂ ಡಮರುಕಸಹಿತಂ ಚಾಂಕುಶಂ ವಾಮಭಾಗೇ
ನಾನಾಲಂಕಾರದೀಪ್ತಂ ಸ್ಫಟಿಕಮಣಿನಿಭಂ ಪಾರ್ವತೀಶಂ ಭಜಾಮಿ ॥

ವಂದೇ ದೇವಮುಮಾಪತಿಂ ಸುರಗುರುಂ ವಂದೇ ಜಗತ್ಕಾರಣಂ
ವಂದೇ ಪನ್ನಗಭೂಷಣಂ ಮೃಗಧರಂ ವಂದೇ ಪಶೂನಾಂ ಪತಿಮ್ ।
ವಂದೇ ಸೂರ್ಯಶಶಾಂಕವಹ್ನಿನಯನಂ ವಂದೇ ಮುಕುಂದಪ್ರಿಯಂ
ವಂದೇ ಭಕ್ತಜನಾಶ್ರಯಂ ಚ ವರದಂ ವಂದೇ ಶಿವಂ ಶಂಕರಮ್ ॥

ಗಾತ್ರಂ ಭಸ್ಮಸಿತಂ ಸಿತಂ ಚ ಹಸಿತಂ ಹಸ್ತೇ ಕಪಾಲಂ ಸಿತಂ
ಖಟ್ವಾಂಗಂ ಚ ಸಿತಂ ಸಿತಶ್ಚ ವೃಷಭಃ ಕರ್ಣೇ ಸಿತೇ ಕುಂಡಲೇ ।
ಗಂಗಾಫೇನಸಿತಾ ಜಟಾ ಪಶುಪತೇಶ್ಚಂದ್ರಃ ಸಿತೋ ಮೂರ್ಧನಿ
ಸೋಽಯಂ ಸರ್ವಸಿತೋ ದದಾತು ವಿಭವಂ ಪಾಪಕ್ಷಯಂ ಸರ್ವದಾ॥

## ಶ್ರೀ ಶಿವಮಾತೃಕಾವರ್ಣಾಕ್ಷರ ಮಾಲಾ ಸ್ತೋತ್ರ

### (ಸಂಕೀರ್ತನಂ)

ಸಾಂಬ ಸದಾಶಿವ ಸಾಂಬ ಸದಾಶಿವ ಸಾಂಬ ಸದಾಶಿವ ಸಾಂಬ ಶಿವ ।
**ಅ**ದ್ಭುತವಿಗ್ರಹ **ಅ**ಮರಾಧೀಶ್ವರ **ಅ**ಗಣಿತ ಗುಣಗಣ **ಅ**ಮೃತ ಶಿವ ॥

**ಆ**ನಂದಾಮೃತ **ಆ**ಶ್ರಿತರಕ್ಷಕ **ಆ**ತ್ಮಾನಂದ ಮಹೇಶ ಶಿವ ।
**ಇಂ**ದುಕಲಾಧರ **ಇಂ**ದ್ರಾದಿಪ್ರಿಯ ಸುಂದರರೂಪ ಸುರೇಶ ಶಿವ ।
**ಈ**ಶ ಸುರೇಶ ಮಹೇಶ ಜನಪ್ರಿಯ ಕೇಶವ-ಸೇವಿತ ಪಾದ ಶಿವ ।
**ಉ**ರಗಾದಿಪ್ರಿಯ ಭೂಷಣ ಶಂಕರ ನರಕವಿನಾಶ ನಟೇಶ ಶಿವ ॥

**ಊ**ರ್ಜಿತದಾನವನಾಶ ಪರಾತ್ಪರ ಅರ್ಜ್ಜಿತಪಾಪವಿನಾಶ ಶಿವ ।
**ಋ**ಗ್ವೇದಶ್ರುತಿ-ಮೌಲಿ-ವಿಭೂಷಣ ರವಿ-ಚಂದ್ರಾಗ್ನಿತ್ರಿನೇತ್ರ ಶಿವ ।
**ೠ**(ರೂ)ಪನಾಮಾದಿ-ಪ್ರಪಂಚವಿಲಕ್ಷಣ ತಾಪನಿವಾರಣ ತತ್ವ ಶಿವ ।
**ಲಿಂ**ಗಸ್ವರೂಪ ಸರ್ವಬುಧಪ್ರಿಯ ಮಂಗಲಮೂರ್ತಿ ಮಹೇಶ ಶಿವ ।

**ಲೃ**ತಾಧೀಶ್ವರ ರೂಪಪ್ರಿಯ ಶಿವ ವೇದಾಂತಪ್ರಿಯ ವೇದ್ಯ ಶಿವ ।
**ಏ**ಕಾನೇಕ-ಸ್ವರೂಪ ವಿಶ್ವೇಶ್ವರ ಯೋಗಿಹೃದಿ ಪ್ರಿಯವಾಸ ಶಿವ ।
**ಐ**ಶ್ವರ್ಯಾಶ್ರಯ ಚಿನ್ಮಯ ಚಿದ್ಘನ ಅಚ್ಯುತಾನಂತ ಮಹೇಶ ಶಿವ ।
**ಓಂ**ಕಾರಪ್ರಿಯ ಉರಗವಿಭೂಷಣ ಹ್ರೌಂಕಾರಾದಿ ಮಹೇಶ ಶಿವ ।

**ಔ**ರಸಲಾಲಿತ ಅಂತಕನಾಶನ ಗೌರೀಸಮೇತ ಗಿರೀಶ ಶಿವ ।
**ಅಂ**ಬರವಾಸ ಚಿದಂಬರ-ನಾಯಕ ತುಂಬುರು ನಾರದ ಸೇವ್ಯ ಶಿವ ।
**ಆಹಾ**ರಪ್ರಿಯ ಆದಿಗಿರೀಶ್ವರ ಭೋಗಾದಿಪ್ರಿಯ ಪೂರ್ಣ ಶಿವ ।
**ಕ**ಮಲಾಸ್ವಾರ್ಚಿತ ಕೈಲಾಸಪ್ರಿಯ ಕರುಣಾಸಾಗರ ಕಾಂತಿ ಶಿವ ।

**ಖ**ಡ್ಗಶೂಲ ಮೃಗ ಢಕ್ಕಾದ್ಯಾಯುಧ-ವಿಕ್ರಮರೂಪ ವಿಶ್ವೇಶ ಶಿವ ।
**ಗಂ**ಗಾಗಿರಿಸುತಾವಲ್ಲಭ ಗುಣಹಿತ ಶಂಕರ ಸರ್ವಜನೇಶ ಶಿವ ।
**ಘಾ**ತಕಭಂಜನ ಪಾತಕನಾಶನ ಗೌರೀಸಮೇತ ಗಿರೀಶ ಶಿವ ।
**ಙ**-ಙಾಸ್ಯತಸ್ಮತಿ ಮೌಲಿ ವಿಭೂಷಣ ವೇದಸ್ವರೂಪ ವಿಶ್ವೇಶ ಶಿವ ।

**ಚಂ**ಡವಿನಾಶನ ಸಕಲಜನಪ್ರಿಯ ಮಂಗಲಾಧೀಶ ಮಹೇಶ ಶಿವ ।
**ಛ**ತ್ರಕಿರೀಟ ಸುಕುಂಡಲ ಶೋಭಿತ ಪುತ್ರಪ್ರಿಯ ಭುವನೇಶ ಶಿವ ।
**ಜ**ನ್ಮಜರಾ ಮೃತಿ ನಾಶನ ಕಲ್ಮಷರಹಿತ ತಾಪವಿನಾಶ ಶಿವ ।
**ಝಂ**ಕಾರಾಶ್ರಯ ಭೃಂಗಿರಿಟ ಪ್ರಿಯ ಓಂಕಾರೇಶ್ವರ ಮಹೇಶ ಶಿವ ।

**ಜ್ಞಾ**ನಾಜ್ಞಾನ ವಿನಾಶನ ನಿರ್ಮಲ ದೀನಜನಪ್ರಿಯ ದೀಪ್ತ ಶಿವ ।
**ಟಂ**ಕಾದ್ಯಾಯುಧ ಧಾರಣ ಸತ್ವರ ಹ್ರೀಂಕಾರಾದಿ ಸುರೇಶ ಶಿವ ।
**ಠಂ**ಕಸ್ವರೂಪ ಸಹಾಕಾರೋತ್ತಮ ವಾಗೀಶ್ವರ ವರದೇಶ ಶಿವ ।
**ಡಂ**ಭವಿನಾಶನ ಡಿಂಡಿಮಭೂಷಣ ಡಂಬರವಾಸ ಚಿದೇಶ ಶಿವ ।

**ಢಂ**ಢಂಡಮರುಕ ಧರಣೀನಿಶ್ಚಲ ಢುಂಢಿವಿನಾಯಕ ಸೇವ್ಯ ಶಿವ ।
**ಣ**ಳಿನವಿಲೋಚನ ನಟನಮನೋಹರ ಅಲಿಕುಲಭೂಷಣ ಅಮೃತ ಶಿವ ।
**ತ**ತ್ತ್ವಮಸಿತ್ಯಾದಿ ವಾಕ್ಯ ಸ್ವರೂಪಕ ನಿತ್ಯಾನಂದ ಮಹೇಶ ಶಿವ ।
**ಸ್ಥಾ**ವರಜಂಗಮ ಭುವನವಿಲಕ್ಷಣ ಭಾವುಕ ಮುನಿವರ ಸೇವ್ಯ ಶಿವ ।

**ದುಃ**ಖವಿನಾಶನ ದಲಿತಮನೋನ್ಮನ ಚಂದನ ಲೇಪಿತ ಚರಣ ಶಿವ ।
**ಧ**ರಣೀಧರ ಶುಭ ಧವಲ ವೀರೇಶ್ವರ ಧನದಾದಿಪ್ರಿಯ ದಾನ ಶಿವ ।
**ನಾ**ನಾಮಣಿಗಣ ಭೂಷಣನಿರ್ಗುಣ ನಟನಜನಪ್ರಿಯ ನಾಟ್ಯ ಶಿವ ।
**ಪ**ನ್ನಗಭೂಷಣ ಪಾರ್ವತಿನಾಯಕ ಪರಮಾನಂದ ಪರೇಶ ಶಿವ ।

**ಫಾ**ಲವಿಲೋಚನ ಭಾನುಕೋಟಿಪ್ರಭ ಹಾಲಾಹಲಧರ ಅಮೃತ ಶಿವ ।
**ಬಂ**ಧವಿನಾಶನ ಬೃಹತೀಸಾಮಗ ಸ್ಕಂದಾದಿಪ್ರಿಯ ಕನಕ ಶಿವ ।
**ಭ**ಸ್ಮವಿಲೇಪನ ಭವಭಯನಾಶನ ಚಿನ್ಮಯರೂಪ ವಿಶ್ವೇಶ ಶಿವ ।
**ಮ**ನ್ಮಥನಾಶನ ಮಧುಪಾನಪ್ರಿಯ ಮಂದರಪರ್ವತವಾಸ ಶಿವ ।

**ಯ**ತಿಜನ ಹೃದಯ ನಿವಾಸಿತ ಈಶ್ವರ ವಿಧಿವಿಷ್ಣ್ವಾದಿ ಸುರೇಶ ಶಿವ ।
**ರಾ**ಮೇಶ್ವರ ರಮಣೀಯ ಮುಖಾಂಬುಜ ಸೋಮಶೇಖರೇಶ್ವರ ಸುಕೃತ ಶಿವ ।
**ಲಂ**ಕಾಧೀಶ್ವರ ಸುರಗಣ ಸೇವಿತ ಲಾವಣ್ಯಾಮೃತ ಲಸಿತ ಶಿವ ।
**ವ**ರದಾಭಯಕರ ವಾಸುಕಿಭೂಷಣ ವನಮಾಲಾದಿ ವಿಭೂಷ ಶಿವ ।

**ಶಾಂ**ತಿ ಸ್ವರೂಪ ಜಗತತ್ರಯ ಚಿನ್ಮಯಕಾಂತ ಮತಿಪ್ರಿಯ ಕನಕ ಶಿವ ।
**ಷ**ಣ್ಮುಖಜನಕ ಸುರೇಂದ್ರಮುನಿಪ್ರಿಯ ಷಡ್ಗುಣ್ಯಾದಿ ಸಮೇತ ಶಿವ ।
**ಸಂ**ಸಾರಾರ್ಣವ ನಾಶನ ಶಾಶ್ವತ ಸಾಧುಹೃದಿ ಪ್ರಿಯವಾಸ ಶಿವ ।
**ಹ**ರಪುರುಷೋತ್ತಮ ಅದ್ವೈತಾಮೃತಪೂರ್ಣ ಮುರಾರಿಸುಸೇವ್ಯ ಶಿವ ।

**ಳಾ**ಳಿತ ಭಕ್ತಜನೇಶ ನಿಜೇಶ್ವರ ಕಲಿನಟ ಈಶ್ವರ ಕಾಮ ಶಿವ ।
**ಕ್ಷ**ರರೂಪಾಭಿ ಪ್ರಿಯಾನ್ವಿತ ಸುಂದರ ಸಾಕ್ಷಿ ಜಗತ್-ತ್ರಯ ಸ್ವಾಮಿ ಶಿವ ।

## ಆತ್ಮ ಪ್ರಬೋಧನಮ್

ಚಂದ್ರೋದ್ಭಾಸಿತಶೇಖರೇ ಸ್ಮರಹರೇ ಗಂಗಾಧರೇ ಶಂಕರೇ
ಸರ್ಪೈರ್ಭೂಷಿತ-ಕಂಠಕರ್ಣವಿವರೇ ನೇತ್ರೋತ್ಥವೈಶ್ವಾನರೇ ।
ದಂತಿತ್ವಕ್ಕೃತಸುಂದರಾಂಬರಧರೇ ತ್ರೈಲೋಕ್ಯಸಾರೇ ಹರೇ
ಮೋಕ್ಷಾರ್ಥಂ ಕುರು ಚಿತ್ತವೃತ್ತಿಮಚಲಾಮನ್ಯೈಸ್ತು ಕಿಂ ಕರ್ಮಭಿಃ ॥

ಕಿಂ ವಾಽನೇನ ಧನೇನ ವಾಜಿಕರಿಭಿಃ ಪ್ರಾಪ್ತೇನ ರಾಜ್ಯೇನ ಕಿಂ
ಕಿಂ ವಾ ಪುತ್ರಕಲತ್ರಮಿತ್ರಪಶುಭಿರ್ದೇಹೇನ ಗೇಹೇನ ಕಿಂ ।
ಜ್ಞಾತ್ವೈತತ್ಕ್ಷಣಭಂಗುರಂ ಸಪದಿ ವೈ ತ್ಯಾಜ್ಯಂ ಮನೋ ದೂರತಃ
ಸ್ವಾತ್ಮಾರ್ಥಂ ಗುರುವಾಕ್ಯತೋ ಭಜ ಭಜ ಶ್ರೀಪಾರ್ವತೀವಲ್ಲಭಂ ॥

## ಸ್ತುತಿ

ತ್ವಮರ್ಕಸ್ತ್ವಂ ಸೋಮಸ್ತ್ವಮಸಿ ಪವನಸ್ತ್ವಂ ಹುತವಹಃ
ತ್ವಮಾಪಸ್ತ್ವಂ ವ್ಯೋಮ ತ್ವಮು ಧರಣಿರಾತ್ಮಾ ತ್ವಮಿತಿ ಚ ।
ಪರಿಚ್ಛಿನ್ನಾಮೇವಂ ತ್ವಯಿ ಪರಿಣತಾ ಬಿಭ್ರತಿ ಗಿರಂ
ನ ವಿದ್ಮಸ್ತತ್ತ್ವಂ ವಯಮಿಹ ತು ಯತ್ ತ್ವಂ ನ ಭವಸಿ ॥

ತ್ರಯೀ ಸಾಂಖ್ಯಂ ಯೋಗಃ ಪಶುಪತಿಮತಂ ವೈಷ್ಣವಮಿತಿ
ಪ್ರಭಿನ್ನೇ ಪ್ರಸ್ಥಾನೇ ಪರಮಿದಮದಃ ಪಥ್ಯಮಿತಿ ಚ ।
ರುಚೀನಾಂ ವೈಚಿತ್ರ್ಯಾದೃಜುಕುಟಿಲ ನಾನಾಪಥಜುಷಾಂ
ನೃಣಾಮೇಕೋ ಗಮ್ಯಸ್ತ್ವಮಸಿ ಪಯಸಾಮರ್ಣವ ಇವ ॥

ಅಸಿತ-ಗಿರಿ-ಸಮಂ ಸ್ಯಾತ್ ಕಜ್ಜಲಂ ಸಿಂಧು-ಪಾತ್ರೇ
ಸುರ-ತರುವರ-ಶಾಖಾ ಲೇಖನೀ ಪತ್ರಮುರ್ವೀ ।
ಲಿಖತಿ ಯದಿ ಗೃಹೀತ್ವಾ ಶಾರದಾ ಸರ್ವಕಾಲಂ
ತದಪಿ ತವ ಗುಣಾನಾಮೀಶ ಪಾರಂ ನ ಯಾತಿ ॥

ಪ್ರಣಾಮ

ನಾಗೇಂದ್ರಹಾರಾಯ ತ್ರಿಲೋಚನಾಯ
ಭಸ್ಮಾಂಗರಾಗಾಯ ಮಹೇಶ್ವರಾಯ ।
ನಿತ್ಯಾಯ ಶುದ್ಧಾಯ ದಿಗಂಬರಾಯ
ತಸ್ಮೈ **ನ**ಕಾರಾಯ ನಮಃ ಶಿವಾಯ ॥

ಮಂದಾಕಿನೀ ಸಲಿಲ ಚಂದನಚರ್ಚಿತಾಯ
ನಂದೀಶ್ವರ ಪ್ರಮಥನಾಥ ಮಹೇಶ್ವರಾಯ ।
ಮಂದಾರ ಪುಷ್ಪ ಬಹುಪುಷ್ಪ ಸುಪೂಜಿತಾಯ
ತಸ್ಮೈ **ಮ**ಕಾರಾಯ ನಮಃ ಶಿವಾಯ ॥

ಶಿವಾಯ ಗೌರೀ ವದನಾಬ್ಜ-ಬಾಲ-
ಸೂರ್ಯಾಯ ದಕ್ಷಾಧ್ವರ-ನಾಶಕಾಯ ।
ಶ್ರೀನೀಲಕಂಠಾಯ ವೃಷಧ್ವಜಾಯ
ತಸ್ಮೈ **ಶಿ**ಕಾರಾಯ ನಮಃ ಶಿವಾಯ ॥

ವಸಿಷ್ಠ ಕುಂಭೋದ್ಭವ ಗೌತಮಾರ್ಯ
ಮುನೀಂದ್ರ ದೇವಾರ್ಚಿತ ಶೇಖರಾಯ ।
ಚಂದ್ರಾರ್ಕ ವೈಶ್ವಾನರ ಲೋಚನಾಯ
ತಸ್ಮೈ **ವ**ಕಾರಾಯ ನಮಃ ಶಿವಾಯ ॥

ಯಜ್ಞ ಸ್ವರೂಪಾಯ ಜಟಾಧರಾಯ
ಪಿನಾಕ ಹಸ್ತಾಯ ಸನಾತನಾಯ ।
ದಿವ್ಯಾಯ ದೇವಾಯ ದಿಗಂಬರಾಯ
ತಸ್ಮೈ **ಯ**ಕಾರಾಯ ನಮಃ ಶಿವಾಯ ॥


ನಮಸ್ತೇ ನಮಸ್ತೇ ವಿಭೋ ವಿಶ್ವಮೂರ್ತೇ
ನಮಸ್ತೇ ನಮಸ್ತೇ ಚಿದಾನಂದಮೂರ್ತೇ ।
ನಮಸ್ತೇ ನಮಸ್ತೇ ತಪೋಯೋಗಗಮ್ಯ
ನಮಸ್ತೇ ನಮಸ್ತೇ ಶ್ರುತಿಜ್ಞಾನಗಮ್ಯ ॥

ನಮೋ ನೇದಿಷ್ಠಾಯ ಪ್ರಿಯದವ ದವಿಷ್ಠಾಯ ಚ ನಮೋ
ನಮಃ ಕ್ಷೋದಿಷ್ಠಾಯ ಸ್ಮರಹರ ಮಹಿಷ್ಠಾಯ ಚ ನಮಃ ।
ನಮೋ ವರ್ಷಿಷ್ಠಾಯ ತ್ರಿನಯನ ಯವಿಷ್ಠಾಯ ಚ ನಮೋ
ನಮಃ ಸರ್ವಸ್ಮೈ ತೇ ತದಿದಮಿತಿ ಶರ್ವಾಯ ಚ ನಮಃ ॥

ಬಹುಲ-ರಜಸೇ ವಿಶ್ವೋತ್ಪತ್ತೌ ಭವಾಯ ನಮೋ ನಮಃ
ಪ್ರಬಲ-ತಮಸೇ ತತ್ ಸಂಹಾರೇ ಹರಾಯ ನಮೋ ನಮಃ ।
ಜನ-ಸುಖಕೃತೇ ಸತ್ತ್ವೋದ್ರಿಕ್ತೌ ಮೃಡಾಯ ನಮೋ ನಮಃ
ಪ್ರಮಹಸಿ ಪದೇ ನಿಸ್ತ್ರೈಗುಣ್ಯೇ ಶಿವಾಯ ನಮೋ ನಮಃ ॥

ವಟವಿಟಪಿಸಮೀಪೇ ಭೂಮಿಭಾಗೇ ನಿಷಣ್ಣಂ
ಸಕಲಮುನಿಜನಾನಾಂ ಜ್ಞಾನದಾತಾರಮಾರಾತ್ ।
ತ್ರಿಭುವನಗುರುಮೀಶಂ ದಕ್ಷಿಣಾಮೂರ್ತಿದೇವಂ
ಜನನಮರಣದುಃಖಚ್ಛೇದದಕ್ಷಂ ನಮಾಮಿ ॥

ಬೇಲೂರು ಮಠದಿಂದ ಪ್ರಕಟವಾದ ಪುಸ್ತಿಕೆಯ ಮುಖಪುಟ


শ্রীশ্রীশিবনাম সংকীর্ত্তনম্

স্বামী ব্রহ্মানন্দ সঙ্কলিত

বে লু ড় ম ঠ
হা ও ড়া

১৩৩০

ಚಿತ್ರಂ ವಟತರೋರ್ಮೂಲೇ ವೃದ್ಧಾಃ ಶಿಷ್ಯಾ ಗುರುರ್ಯುವಾ ।
ಗುರೋಸ್ತು ಮೌನಂ ವ್ಯಾಖ್ಯಾನಂ ಶಿಷ್ಯಾಸ್ತು ಛಿನ್ನಸಂಶಯಾಃ ॥

ಓಂ ನಮಃ ಪ್ರಣವಾರ್ಥಾಯ ಶುದ್ಧಜ್ಞಾನೈಕಮೂರ್ತಯೇ।
ನಿರ್ಮಲಾಯ ಪ್ರಶಾಂತಾಯ ದಕ್ಷಿಣಾಮೂರ್ತಯೇ ನಮಃ ॥

ನಮಃ ಶಿವಾಯ ಶಾಂತಾಯ ಕಾರಣತ್ರಯ ಹೇತವೇ ।
ನಿವೇದಯಾಮಿ ಚಾತ್ಮಾನಂ ತ್ವಂ ಗತಿಃ ಪರಮೇಶ್ವರ ॥

ಫಲಶ್ರುತಿ

ಸರ್ವಾತ್ಮತ್ವಮತಿಸ್ಫುಟೀಕೃತಮಿದಂ ಯಸ್ಮಾದಮುಷ್ಮಿನ್ ಸ್ತವೇ।
ತೇನಾಸ್ಯ ಶ್ರವಣಾತ್ತದರ್ಥ ಮನನಾತ್ ಧ್ಯಾನಾಚ್ಚ ಸಂಕೀರ್ತನಾತ್॥
ಸರ್ವಾತ್ಮತ್ವಮಹಾವಿಭೂತಿಸಹಿತಂ ಸ್ಯಾದೀಶ್ವರತ್ವಂ ಸ್ವತಃ ।
ಸಿದ್ಧ್ಯೇತ್ ತತ್ ಪುನರಷ್ಟಧಾ ಪರಿಣತಂ ಚೈಶ್ವರ್ಯಮವ್ಯಾಹತಮ್ ॥

॥ ಹರಿಃ ಓಂ ತತ್ ಸತ್ ॥

॥ ಇತಿ ಶ್ರೀ ಶ್ರೀ ಶಿವನಾಮ ಸಂಕೀರ್ತನಂ ಸಮಾಪ್ತಮ್ ॥

**ಉಪಸಂಹಾರ**

ನೂರು ವರ್ಷಗಳ ಹಿಂದೆ ಶ್ರೀಮಹಾರಾಜರು, ನಮ್ಮ ಕನ್ನಡ ನಾಡಿನಿಂದ ಬಂಗಾಳಕ್ಕೆ ಕೊಂಡೊಯ್ದ ಈ ಶಿವನಾಮ ಸಂಕೀರ್ತನೆಯು ಇಂದು ಪ್ರಪಂಚಾದ್ಯಂತ ಶ್ರೀರಾಮಕೃಷ್ಣ ಸಂಘದ ಕೇಂದ್ರಗಳಲ್ಲಿ ಹಾಡಲ್ಪಡುತ್ತಿದೆ. ಬರೀ ವಂಗದೇಶದ ಜನರ ಹೃದಯದಲ್ಲಷ್ಟೇ ಅಲ್ಲದೇ ಶ್ರೀರಾಮಕೃಷ್ಣರ ಎಲ್ಲ ದೇಶ-ಭಾಷೆಯ ಭಕ್ತರ ಹೃದಯಗಳಲ್ಲಿ ಸ್ಥಾನ ಗಳಿಸಿದೆ. ಶ್ರೀಮಹಾರಾಜರು ಆಸೆಪಟ್ಟಂತೆ ನಾವೆಲ್ಲರೂ ಈ ಪವಿತ್ರ ಕೀರ್ತನೆಯನ್ನು ನಿಯಮಿತವಾಗಿ ಕೇಳಿ, ಭಾವಿಸಿ, ಧ್ಯಾನಿಸಿ, ಕೀರ್ತಿಸಿ ಅಷ್ಟೈಶ್ವರ್ಯಗಳೆಂಬ ಮಹಾವಿಭೂತಿಗಳನ್ನು, ಶಿವನ ಸರ್ವಾತ್ಮತ್ವದ ಸಾಕ್ಷಾತ್ಕಾರವೆಂಬ ಈಶ್ವರತ್ವವನ್ನೂ, ಗಳಿಸಿಕೊಂಡು ಜೀವ-ಜೀವರಲ್ಲೂ ಶಿವನನ್ನು ಕಂಡು ಸೇವಿಸೋಣ, ನಮ್ಮ ನಿಜಸ್ವರೂಪವಾದ ಶಿವತ್ವವನ್ನು ಪಡೆದುಕೊಳ್ಳೋಣ. ನಮ್ಮೆಲ್ಲರ ಆಧಿಭೌತಿಕ, ಆಧಿದೈವಿಕ, ಆಧ್ಯಾತ್ಮಿಕ ತಾಪಗಳನ್ನು ನೀಗಿ, ನಮ್ಮೆಲ್ಲರಿಗೂ ಆ ಪರಮಮಂಗಲಸ್ವರೂಪಿಯು ಸನ್ಮಾಂಗಲ್ಯವನ್ನುಂಟುಮಾಡಲಿ ಎಂಬುದು ಈ ಲೇಖನದ ಆಶಯ. ❖